## ಕಳೆದ ಸಂಚಿಕೆಯಲ್ಲಿ



ತಾಯಿಯ ವಾತ್ಸಲ್ಯ ಮತ್ತು ಕಾಳಜಿ ದೊರೆಯದ ಕಾರಣದಿಂದಾಗಿ ನೀಲ್ ಅಪ್ಪನನ್ನು ಹುಡುಕಿಕೊಂಡು ಬಂದಿರುವುದಾಗಿ ಮಾರ್ಕೋ ಆಪಾದಿಸಿದ. ಮಗನ ಕಣ್ಣಿನಲ್ಲೂ ಆರೋಪಿಯ ಸ್ಥಾನದಲ್ಲಿ ನಿಲ್ಲಬೇಕಾಗಿ ಬಂದುದು ನ್ಯಾನ್ಸಿಯ ಸಂಕಟವನ್ನು ಹೆಚ್ಚಿಸಿತು. ಅವಳ ಪಾಲಿಗೆ ಅಂತಿಮವಾಗಿ ಉಳಿದುದು ಮಸಾಜ್ ಪಾರ್ಲರ್ ಮಾತ್ರ. ಅದನ್ನು ಅಭಿವೃದ್ಧಿಪಡಿಸುವಲ್ಲಿ ನ್ಯಾನ್ಸಿ ತನ್ನ ಜೀವನದ ಉದ್ದೇಶವನ್ನಾಗಿಸಿಕೊಂಡಳು. ಆ ಮಸಾಜ್‌ಗೆ ಗ್ರಾಹಕನಾಗಿ ಬಂದ ವ್ಯಕ್ತಿಯೊಂದಿಗೆ ತನ್ನ ಜೀವನದ ಕಥೆಯನ್ನು ಹೇಳಿಕೊಂಡು ಹಗುರಾಗಿದ್ದಳು. ಕಥೆಯೇನೋ ಮುಗಿಯಿತು. ಮುಂದೇನು? ನ್ಯಾನ್ಸಿ ಹೇಳಿದ ಕಥೆ ಏಕಮುಖವಾದುದು ಎನ್ನುವುದು ಆತನಿಗೆ ಗೊತ್ತಿತ್ತು. ಜೀವನದಲ್ಲಿ ಯಾರೂ ಪೂರ್ಣ ಪ್ರಮಾಣದಲ್ಲಿ ಒಳ್ಳೆಯವರಾಗಿರುವುದು ಸಾಧ್ಯವಿಲ್ಲ ಎನ್ನುವುದೂ ಆತನಿಗೆ ತಿಳಿದಿತ್ತು. ಮಸಾಜಿನ ನಂಟು ಯಾವ ಸ್ವರೂಪ ಪಡೆದುಕೊಳ್ಳಬಹುದೆನ್ನುವುದು ಯಾರಿಗೆ ಗೊತ್ತು?

ಗರ್ಭಿಣಿಯಾಗುವುದು ಸಹಜವಲ್ಲ, ಆದರೆ ಇದು ಸಾಧ್ಯತೆಯ ಪರಿಧಿಯಿಂದ ಹೊರತಾಗೂ ಇಲ್ಲ. ಯಾವ ವಯಸ್ಸಿನಲ್ಲಿ ಗರ್ಭ ಧರಿಸಿ ಮಗುವಿಗೆ ಜನ್ಮ ಕೊಡುವುದು ಕಷ್ಟಸಾಧ್ಯ ಎಂಬುದು ಯಾರಿಗೂ ಗೊತ್ತಿಲ್ಲ. ಹೆಣ್ಣಿನ ವಯಸ್ಸು ಗಂಡಿಗೆ ಸದಾ ಒಂದು ವಿಮರ್ಶೆಯೇ ಆಗಿದೆ. ಮಹಿಳೆಯೊಬ್ಬಳ ಜೈವಿಕ ಗಡಿಯಾರದ ಬಗ್ಗೆ ಏನನ್ನೂ ಹೇಳಲಾಗದು. ಇದು ಇಂದಿಗೂ ಒಂದು ರಹಸ್ಯವೇ.

ಈಗ ನಲವತ್ತೊಂಬತ್ತನೆಯ ವಯಸ್ಸಿನ ನ್ಯಾನ್ಸಿಗೆ ವಾಂತಿಯಾಗುತ್ತಿದ್ದು, ಅವಳು ಗರ್ಭಾವಸ್ಥೆಯಲ್ಲಾಗುವ ಕಳವಳಗಳಿಂದ ವ್ಯಾಕುಲಳಾಗಿದ್ದಾಳೆ. ಪ್ರೆಗ್ನೆನ್ಸಿ ಟೆಸ್ಟ್ ನಂತರ ಅಲ್ಟ್ರಾಸೌಂಡ್ ಆಯಿತು. ಟೆಕ್ನೀಶಿಯನ್ ಸ್ಕ್ರೀನ್‌ನಲ್ಲಿ ತೋರಿಸುತ್ತಾ ಹೇಳಿದ, 'ಇಲ್ಲಿ ಮಗುವಿನ ಹೃದಯದ ಬಡಿತವಿದೆ.'

'ಅಂದರೆ ವಾಸ್ತವವಾಗಿಯೂ ಮಗು ಇದೆಯೇ?' ನ್ಯಾನ್ಸಿ ಭಯದಿಂದ ಕಂಪಿಸುತ್ತಾ ಕೇಳಿದಳು. ನನ್ನೆದೆ ಸಹ ಬಡಿದುಕೊಂಡಿತು.

'ಹೌದು, ನೀವು ಪ್ರೆಗ್ನೆಂಟ್ ಆಗಿದ್ದೀರಿ' – ಟೆಕ್ನೀಶಿಯನ್ ಹೇಳಿದಳು. ನಮ್ಮಿಬ್ಬರಿಗೂ ಆಶ್ಚರ್ಯವಾಯಿತು. ನಾವು ಹೆಚ್ಚು ರೋಮಾಂಚನವನ್ನು ಮನಗಾಣದೆ, ಹೆಚ್ಚು ಭಯಭೀತರಾದೆವು.

ನನ್ನ ಹೆಣ್ಣು ಮಕ್ಕಳಾದ ಲೂಸಿ ಮತ್ತು ಗ್ರೇಸಿ ಇಪ್ಪತ್ತೈದರ ವಯಸ್ಸನ್ನು ದಾಟಿದ್ದರು. ನ್ಯಾನ್ಸಿಯ ಹಿರಿಯ ಮಗನಿಗೆ ಸುಮಾರು ಮೂವತ್ತು ವರ್ಷವಾಗಿತ್ತು, ಕಿರಿಯವನಿಗೆ ಹತ್ತು ವರ್ಷವಾಗಿತ್ತು. ನಾವು ಮತ್ತೆ ತಂದೆ–ತಾಯಿ ಆಗುತ್ತಿದ್ದೇವೆ. ಅಲ್ಟ್ರಾಸೌಂಡ್ ಮಾಡಿಸಿದ ದಿನ ನ್ಯಾನ್ಸಿ ಬಂದು ನನ್ನೊಂದಿಗಿರಲಾಂಭಿಸಿದ್ದಳು. ಮೂರು ತಿಂಗಳ ನಂತರ ನಾವು ತುಂಬಾ ಸರಳವಾಗಿ, ಸಡಗರವಿಲ್ಲದೆ ಚರ್ಚ್‌ನಲ್ಲಿ ವಿವಾಹವಾದೆವು. ನನ್ನ ಸಹೋದರ–ಸಹೋದರಿ ಮತ್ತು ಅಮ್ಮ ನಮ್ಮ ಮದುವೆಗೆ ಬರಲು ಕಾತರರಾಗಿದ್ದರು. ನಾನು ಅವರನ್ನು ತಡೆದೆ.

ವಿವಾಹದ ನಂತರ ನಾವು ಸುದ್ದಿಯನ್ನು ಪ್ರಸಾರ ಮಾಡಿದೆವು. ಮಿಶ್ರ ಪ್ರತಿಕ್ರಿಯೆಗಳು ಬಂದವು; ವಿಶೇಷವಾಗಿ ನಮ್ಮ ಮಕ್ಕಳ ಪ್ರತಿಕ್ರಿಯೆಗಳು... ಲೂಸಿ ನಕ್ಕಳು, ರೋದಿಸಿದಳು, ನಂತರ ಕಿಲಕಿಲನೆ ನಕ್ಕಳು. ಗ್ರೇಸಿ ಮೊದಲು ರೇಗಿದಳು, ನಂತರ ಸಾಮಾನ್ಯ ಸ್ಥಿತಿಗೆ ಬಂದಳು. ನ್ಯಾನ್ಸಿಯ ಹಿರಿಯ ಮಗ ಜೋಶುಆ ತಟಸ್ಥನಾಗಿ ಉಳಿದ. ಕಿರಿಯ ಮಗ ನೀಲ್ ಉತ್ಸುಕತೆಯಿಂದ, 'ಮಗು ತನ್ನೊಂದಿಗೆ ಐಸ್‌ಕ್ರೀಮ್ ತಿನ್ನುವಷ್ಟು ದೊಡ್ಡವನಾಗುವುದು ಯಾವಾಗ? ಅವನು ಫುಟ್‌ಬಾಲ್ ಆಡುವುದು ಯಾವಾಗ? ಎಂದು ಪ್ರಶ್ನಿಸಿದ. ನಿಮಗೇನಾದರೂ ಆದರೆ, ಮಗುವಿಗೆ ನಿಮ್ಮಿಂದೇನು ಪ್ರಯೋಜನವೆಂದು ವಕೀಲರಂತೆ ನನ್ನ ಸಹೋದರ–ಸಹೋದರಿ ಕೇಳಿದರು. ನಾನು ಅವರಿಗೆ, ನಾವು ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ, ಇದರಿಂದ ಮಗುವಿನ ಭವಿಷ್ಯ ಆರ್ಥಿಕವಾಗಿ ಸುರಕ್ಷಿತವಾಗಿರುವುದು' ಎಂದೆ. ಮಮ್ಮಿಗೆ ತುಂಬಾ ಖುಷಿಯಾಯಿತು; ಅವಳು 'ಈ ಮಗು ನನಗೊಂದು ವರ' ಎಂದಳು. ಹುಟ್ಟದ ಮಗುವಿನ ಭವಿಷ್ಯದ ಸುರಕ್ಷತೆಗಾಗಿ ಅವಳು ತಾನು ಕೂಡಿಟ್ಟ ಹಣದಲ್ಲಿ ಸ್ವಲ್ಪ ಹಣವನ್ನೂ ನನಗೆ ಕೊಟ್ಟಳು.

ಮೊದಲು ನಮ್ಮ ಪರಿವಾರದ ಸದಸ್ಯರಿಗೆ ವಿಷಯವನ್ನು ತಿಳಿಸಿದೆವು, ನಂತರ ನಮ್ಮ ಸ್ನೇಹಿತರಿಗೆ ತಿಳಿಸಿದೆವು. ನಮ್ಮ ಸ್ನೇಹಿತರು ತಮ್ಮ ಮಕ್ಕಳ ವಿವಾಹವನ್ನು ಮಾಡುತ್ತಿದ್ದರು; ಕೆಲವರು ತಮ್ಮ ತಮ್ಮ ಮೊಮ್ಮಗ ಮೊಮ್ಮಗಳ ಆನಂದವನ್ನು ಸವಿಯುತ್ತಿದ್ದಾರೆ; ಕೆಲವರು ಸನ್ಯಾಸ ತೆಗೆದುಕೊಳ್ಳುವ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಅವರು ನಮ್ಮ ಭಾವಿ ಮಗುವಿನ ಆಗಮನದ ಸುದ್ದಿ ಕೇಳಿ ಮನಸಾರೆ ನಕ್ಕರು. ಅದರೊಂದಿಗೆ ಪ್ರೀತಿಯಿಂದ ದ್ವೇಷವನ್ನೂ ವ್ಯಕ್ತಪಡಿಸಿ ಆಶ್ಚರ್ಯದಿಂದ ಕೇಳಿದರು, 'ನೀವಿಬ್ಬರು ಇನ್ನೂ ಯುವಕರು. ಇದರ ರಹಸ್ಯವೇನು?' ನಮ್ಮನ್ನು ಹೊಸ ಪೇರೆಂಟ್ಸ್ ಎಂದು ತಿಳಿದು ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಿದರು. ಒಬ್ಬ ಮಿತ್ರ ತನ್ನ ಮೊಮ್ಮಗನ ಉದಾಹರಣೆಯನ್ನು ಹೇಳಿ, ಈಗ ಅವನ ಮೊಮ್ಮಗ ದೊಡ್ಡವನಾಗಿದ್ದಾನೆ ಎಂದ.

ನಾವು ಕೆಲವು ವಿಕಾರ ಕಾಮೆಂಟ್ಸ್‌ಗಳನ್ನು ಸಹ ಕೇಳಬೇಕಾಯಿತು.

'ಕ್ಲೈಂಟ್ಸ್‌ನೊಂದಿಗೆ ಡೇಟಿಂಗ್ ಮತ್ತು ಮದುವೆ ಮಾಡಿಕೊಳ್ಳುವುದು ಓರ್ವ ಪ್ರೊಫೆಷನಲ್ ಮಸಾಜ್ ಥೆರಪಿಸ್ಟ್‌ಳ ಅನೈತಿಕತೆಯನ್ನು ತೋರಿಸುತ್ತದೆ.'

'ಈ ಥೆರಪಿಸ್ಟ್ ಅದೆಷ್ಟು ಕ್ಲೈಂಟ್ಸ್‌ಗಳೊಂದಿಗೆ ಹೀಗೆ ಮಾಡುತ್ತಿದ್ದಾಳೆ?'

ಇಂಥ ವ್ಯಂಗ್ಯದ ಮಾತುಗಳಿಗೆ ನಾವು ಗಮನವನ್ನು ಕೊಡಲಿಲ್ಲ. ನಾವು ಮಗುವಿನ ಶಾಲೆಯ ಬಗ್ಗೆ ಯೋಚಿಸುತ್ತಿದ್ದೇವೆ. ಹಿರಿಯ ವಯಸ್ಸಿನಲ್ಲಿ ತಾಯಿಯಾದ ಮಹಿಳೆಯರ ಸಲಹೆಯನ್ನು ಕೇಳುತ್ತಿದ್ದೇವೆ. ನಾವು ಮತ್ತೆ ತಂದೆ–ತಾಯಿಯ ಹಳಿಗೆ ಇಳಿಯುತ್ತಿದ್ದೇವೆ. ನಮ್ಮ ಜೀವನ ಇಂಟರೆಸ್ಟಿಂಗ್ ಚಾಲೆಂಜ್‌ಗಳಿಂದ ಆವರಿಸಿತು.

ಸುಮಾರು ಐವತ್ತನೆಯ ವಯಸ್ಸಿನಲ್ಲಿ ನ್ಯಾನ್ಸಿ ಮತ್ತೆ ತಾಯಿಯಾಗುತ್ತಿದ್ದಾಳೆ. ಒಂದರ ನಂತರ ಎರಡನೆಯ ತಿಂಗಳು, ನಂತರ ಮೂರನೆಯ ತಿಂಗಳು ಮೆಲ್ಲಮೆಲ್ಲನೆ ಕಳೆಯುತ್ತಿದೆ. ನನ್ನ ಹೆಂಡತಿಯ ಹೊಟ್ಟೆ ಮುಂದೆಮುಂದೆ ಬರುತ್ತಿದೆ. ನಿಜವನ್ನು ಕೇಳುವುದು ಕಷ್ಟವಾಗುತ್ತದೆ. ಮಗು ಹುಟ್ಟಿದ ಲೆಕ್ಕದಿಂದ ನೋಡಿದರೆ, ಅವಳು ವೃದ್ಧೆಯೆನ್ನಲಾಗುತ್ತದೆ. ಹೈ ರಿಸ್ಕ್ ಪ್ರೆಗ್ನೆನ್ಸಿ, ಅಪಾಯದ ಗರ್ಭಾವಸ್ಥೆ, ಮಗುವಿಗೆ ಡೌನ್ ಸಿಂಡ್ರೋಮ್ ಅಥವಾ ಇನ್ನಿತರ ವಿಕಾರವಾಗುವ ಅಪಾಯ, ವೈದ್ಯರನ್ನು ಅನೇಕ ಬಾರಿ ಭೇಟಿಯಾಗುವುದು, ಬೆಡ್ ರೆಸ್ಟ್ ಮುಂತಾದವುಗಳು... ಯಾವುದೇ ಫರ್ಟಿಲಿಟಿ ಟ್ರೀಟ್‌ಮೆಂಟಿಲ್ಲದೆ ನಲವತ್ತೊಂಬತ್ತನೆಯ ವಯಸ್ಸಿನಲ್ಲಿ ಮಹಿಳೆ ಗರ್ಭಿಣಿಯಾಗುವುದು ಜಗತ್ತಿಗೂ ಒಂದು ಕುತೂಹಲದ ವಿಷಯವಾಗಿದೆ. ವೈದ್ಯರು ಅವಳನ್ನು ಸಾಕಷ್ಟು ಆರೈಕೆ ಮಾಡುತ್ತಿದ್ದಾರೆ, ಅವಳ ಪ್ರಸವ ಯಶಸ್ವಿಯಾಗಲಿ, ಸುರಕ್ಷಿತವಾಗಿರಲಿ ಎಂದು ಬಯಸುತ್ತಾರೆ.

ನಾನು ಅವಳ ಮಸಾಜ್ ಪಾರ್ಲರ್ ಮುಚ್ಚಲು ಬಿಡಲಿಲ್ಲ. ಇದೇ ಮಸಾಜ್‌ನಲ್ಲಿ ನನ್ನ ಮತ್ತು ನ್ಯಾನ್ಸಿಯ ನಡುವೆ ಪ್ರೀತಿ ಬೆಳೆದಿತ್ತು. ಮೂವರು ಪತಿಯರ ನ್ಯಾನ್ಸಿಗೆ ಅವಳದೇ ಆದ ಕೆಲವು ನಿಶ್ಚಿತ ಸಿದ್ಧಾಂತಗಳಿವೆ. ಅದೊಂದು ದಿನ ನಾನು ರೋಮಾಂಚನಗೊಂಡೆ. ಅವಳನ್ನು ಮಸಾಜ್ ಸೆಂಟರ್‌ನಲ್ಲಿ ತಬ್ಬಿಕೊಂಡು ಮನಸಾರೆ ಚುಂಬಿಸುತ್ತಿರುವಾಗ, ಅವಳು ನನ್ನನ್ನು ಇದ್ದಕ್ಕಿದ್ದಂತೆ ತಡೆದು ಹೇಳಿದಳು, 'ಇದು ಮಸಾಜ್ ಸೆಂಟರ್. ರೊಮಾನ್ಸ್ ಸೆಂಟರ್ ಅಲ್ಲ. ನಾವು ಕೆಲವು ಪ್ರೊಫೆಷನಲಿಸಂ ನೈತಿಕತೆಯನ್ನೂ ಪಾಲಿಸಬೇಕಾಗುತ್ತದೆ.'

ನಾನು ತಡೆದುಕೊಂಡೆ. ಅನೇಕ ಮಸಾಜ್